† ಶ್ರೀ ಎಸ್. ಬಿ. ನಾಗರಾಳ್.—ಇದನ್ನು ಬೇಗ ರಿಪೇರಿ ಮಾಡಬೇಕೆಂದು ಎಸ್ಟಿಮೇಟ್ ಮಾಡಲಾಗಿತ್ತು. ಆದರೆ ಚೆಕ್ನಿಕಲ್ ಆಡಿಟ್ ಸೆಲ್‌ನವರು ಸದ್ಯಕ್ಕೆ ಈಗ ಇದನ್ನು ತೆಗೆದುಕೊಳ್ಳ ಬಾರದು ಎಂದು 1965ನೇ ಇಸವಿಯಲ್ಲಿ ಹೇಳಿದ್ದರು. ಆದ್ದರಿಂದ ಅದು ಇಲ್ಲಿಯವರೆಗೂ ಹಾಗೆಯೇ ಉಳಿದಿದೆ. ಈಗ ಮತ್ತೆ 8ನೇ ಜುಲೈ 1974 ರಲ್ಲಿ ಚೆಕ್ನಿಕಲ್ ಆಡಿಟ್ ಸೆಲ್‌ನವರು ಬಂದು ಆ ಕೆಲಸವನ್ನು ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಆದ್ದರಿಂದ ಈಗಾಗಲೇ ಸರ್ಕಾರದವರು ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಚೀಫ್ ಇಂಜಿನಿಯರಿಗೆ ಆದೇಶವನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು.—ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಮಾಡಿಕೊ ರಾ ?

ಶ್ರೀ ಎಸ್. ಬಿ. ನಾಗರಾಳ್.—ಬೇಗ ಪ್ರಯತ್ನ ಮಾಡೋಣ. ಅದು ಯಾವಾಗ ಮುಗಿಯುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು.—ಇದರಿಂದ ಅಲ್ಲಿನ ರೈತರಿಗೆ ಬಹಳ ತೊಂದರೆ ಯಾಗಿದೆ. ಆದ್ದರಿಂದ ಈ ಕೆಲಸವನ್ನು ಆದಷ್ಟು ಬಾಗ್ಯತೆ ಮುಗಿಸುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಬೇಗ ಮುಗಿಸಿಕೊಡುತ್ತೇವೆ.

Financial Assistance by World Bank to Upper Krishna Project.

198. Sri BAPU GOWDA (Shahapur).—

Will the Chief Minister be pleased to state :—

(*a*) whether the World Bank Team has visited recently the site of Upper Krishna Project ;

(*b*) if so when the Team visited the site ;

(*c*) whether it is not a fact that the World Bank has rejected the request of the State Government to finance this Project ;

(*d*) if so, the reasons for the same ?

Sri D. DEVARAJ URS.—

(*a*) Yes.

(*b*) On 4th and 5th July, 1974.

(*c*) No.

(*d*) Does not arise in view of reply to Clause (*c*) above.

ಶ್ರೀ ಬಾಪುಗೌಡ.—1974ನೇ ಇಸವಿ ಜುಲೈ ತಿಂಗಳಿನಲ್ಲಿ ವಿಶ್ವಬ್ಯಾಂಕಿನ ತಂಡದವರು ಕೃಷ್ಣಾ ಮೇಲ್ದಂಡೆಯ ನಿವೇಶನಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಈ ಯೋಜನೆಗೆ ಹಣವನ್ನು ಒದಗಿಸಬೇಕೆಂಬ ವಿಷಯದಲ್ಲಿ ಅವರು ತಮ್ಮಲ್ಲಿ ಏನಾದರೂ ವಿಚಾರ ಮಾಡಿದ್ದಾರೆಯೇ ?

† ಶ್ರೀ ಡಿ. ದೇವರಾಜ ಅರಸ್.—ಅವರು ನಮ್ಮ ಜೊತೆಯಲ್ಲಿ ಏನು ಮಾತನಾಡಿಲ್ಲ. ಇತ್ತೀಚೆಗೆ ನಮ್ಮ ಅಧೀನರು ಅಲ್ಲಿಗೆ ಹೋಗಿದ್ದರು. ಅವರು ಅಲ್ಲಿ ಹೋದಾಗ ವರ್ಲ್ಡ್ ಬ್ಯಾಂಕಿನವರು ಕೇಂದ್ರದ ಮೂಲಕ ಹಣ ಸಹಾಯವನ್ನು ಕೊಡಬೇಕು ಎನ್ನುವ ವಿಷಯವನ್ನು ತಿಳಿಸಿದ್ದಾರೆ. ಎಷ್ಟು ಕೊಡುತ್ತಾರೆ ಯಾವಾಗ ಕೊಡುತ್ತಾರೆ ಎನ್ನುವ ವಿಷಯ ಗೊತ್ತಿಲ್ಲ. ಪತ್ರಿಕೆಯಲ್ಲಿದೆಯೆಂಬುದು ನನಗೂ ಗೊತ್ತು. ಲೋಕಸಭೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೂ ವರ್ಲ್ಡ್ ಬ್ಯಾಂಕಿನವರು ಸಹಾಯಮಾಡುತ್ತಾರೆಂದು ಹೇಳಿದ್ದಾರೆ. ಅಷ್ಟು ಏನಹ ನಮಗೆ ಇನ್ನೇನೂ ಗೊತ್ತಿಲ್ಲ.

ಶ್ರೀ ಬಾಪುಗೌಡ.—ಪತ್ರಿಕೆಗಳಲ್ಲಿ ಕೊಟ್ಟಿರುವ ಹೇಳಿಕೆಯ ಪ್ರಕಾರ ನೀರಾವರಿ ಉಪಸಚಿವರು ಗೋದಾವರಿ ಪ್ರಾಜೆಕ್ಟ್ ಮತ್ತು ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ವರ್ಲ್ಡ್ ಬ್ಯಾಂಕಿನವರೂ ಸಹ ಸಹಾಯಮಾಡುತ್ತಾರೆಂದು ಹೇಳಿದ್ದಾರೆಂಬುದು ರಾಜ್ಯಸರ್ಕಾರದವರಿಗೆ ಗೊತ್ತಾದ ಮೇಲೆ ಕೇಂದ್ರ ಸರ್ಕಾರದ ಜೊತೆಯಲ್ಲಿ ನಮ್ಮ ಸರ್ಕಾರದವರು ಮಾತುಕತೆಗಳನ್ನು ಮುಂದುವರಿಸಿ ಈಗಲಾದರೂ ಇನ್ನಾದರೂ ತೀವ್ರಗತಿಯಿಂದ ಇದಕ್ಕೆ ಸಹಾಯ ಮಾಡುವ ಹಾಗೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಏಕೆ ಆ ರೀತಿಯಾಗಿ ಊಹೆ ಮಾಡುತ್ತಾರೋ ನನಗೆ ಗೊತ್ತಾಗಲಿಲ್ಲ. ಅವರು ಈ ಯೋಜನೆಗೆ ಸಹಾಯಮಾಡುತ್ತಾರೆಂಬುದು ಪತ್ರಿಕೆಯಲ್ಲಿ ಬಂದಿರುವುದು ನನಗೆ ಗೊತ್ತಿರುವುದಾಗಿದೆ.

Short Notice Queston and Answer

Withdrawal of cases field agaInst Students.

3. Sri H. D. DEVE GOWDA (Holenarasipur).—

Will the Chief Minister be pleased to state :—

(*a*) the number of cases launched against students (districtwise) during 1973-74 ;

(*b*) the number of representations received for withdrawal of cases ;

(*c*) the number of cases withdrawn ;

(*d*) the criteria adopted for the withdrawal of cases ?

Sri D. DEVARAJ URS (Chief Minister).—

(*a*)	Bangalore City...	16
	Bangalore District...	6
	Mandya ,,	2
	Hassan ,,	10
	Chickmagalur ,,	16
	Chitradurga ,,	2
	Tumkur ,,	21
	Kolar ,,	9
	Shimoga ,,	1
	Belgaum ,,	11
	Bijapur ,,	4
	Dharwar ,,	2
	South Kanara ,,	1
	Bidar ,,	1
	Coorg ,,	31
	Mysore ,,	21
	Total	154

(*b*) 10.